ಹೊಳೆನರಸೀಪುರದ ಅಪರ ಜೆ.ಎಂ.ಎಫ್.ಸಿ. ರವರ ನ್ಯಾಯಾಲಯದಲ್ಲಿ.

ಸಿ.ಸಿ. ನಂಃ **289/2022**

| | | | |
|---|---|---|---|
| ಸಾಕ್ಷಿಯ ಹೆಸರು | ಃ ರುದ್ರಯ್ಯ | ಸಿ.ಡಬ್ಲ್ಯೂ | ಃ 02 |
| ತಂದೆ ಹೆಸರು | ಃ ಲೇ. ಈರಯ್ಯ | ಪಿ.ಡಬ್ಲ್ಯೂ | ಃ 02 |
| ವಯಸ್ಸು | ಃ 76 ವರ್ಷ | ಪ್ರಮಾಣೀಕರಿಸಿದ ದಿಃ | 19.06.2026 |
| ವೃತ್ತಿ | ಃ ಕೃಷಿ | | |
| ವಾಸ | ಃ ತೆರಣ್ಯ ಗ್ರಾಮ | | |

ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

ಮುಖ್ಯ ವಿಚಾರಣೆಃ- ಮಾನ್ಯ ಎ.ಪಿ.ಪಿ.ಯವರಿಂದಃ

ನನಗೆ ಈ ಪ್ರಕರಣದ ಬಗ್ಗೆ ಏನು ತಿಳಿದಿಲ್ಲ. ನ್ಯಾಯಾಲಯದ ಮುಂದಿರುವ ಆರೋಪಿ ನಮ್ಮೂರಿನವರು. ನಾನು ಯಾವುದೇ ಗಲಾಟೆಗೆ ಸಂಬಂಧಿಸಿದಂತೆ ಯಾವುದೇ ಹೇಳಿಕೆ ಪೊಲೀಸರಲ್ಲಿ ದಾಖಲಿಸಿಲ್ಲ. ನಾನು ಯಾವುದೇ ಮಹಜರ್ ಗೆ ಸಹಿ ಹಾಕಿಲ್ಲ. ಸಾಕ್ಷಿಗೆ ಸ್ಥಳ ಮತ್ತು ಅಮಾನತ್ ಮಹಜರ್ ಅನ್ನು ತೋರಿಸಲಾಗಿ ಅದರಲ್ಲಿ ಅವರು ತಮ್ಮ ಸಹಿಯನ್ನು ಗುರುತಿಸಿದ್ದರಿಂದ ಅದನ್ನು ನಿ ಪಿ 3 ಎಂದು ಸಹಿಯನ್ನು 3 (ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಸದರಿ ಸಹಿಯನ್ನು ಠಾಣೆಯಲ್ಲಿ ಮಾಡಿದ್ದು ಎನ್ನುತ್ತಾರೆ.

(ಮಾನ್ಯ ಎ.ಪಿ.ಪಿ.ಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿರುತ್ತಾರೆ. ಸ್ಥಳ ಮತ್ತು ಅಮಾನತ್ ಮಹಜರ್ ಪರಿಶಿಲೀಸಿ ಪಾಟಿ ಸವಾಲಿಗೆ ಅನುಮತಿ ನೀಡಲಾಯಿತು.)

ಪಾಟೀ ಸವಾಲುಃ - ಮಾನ್ಯ ಎ.ಪಿ.ಪಿ. ರವರಿಂದಃ

ದಿನಾಂಕ 20.12.2015 ರಂದು ಸಂಜೆ 8.00 ಗಂಟೆಗೆ ಆರೋಪಿ ನಮ್ಮ ಮನೆ ಮುಂದೆ ನನ್ನನ್ನು ಮತ್ತು ಚಾ ಸಾ 3 ರವರನ್ನು ಅಡ್ಡಗಟ್ಟಿ ನಮ್ಮ ಜಮೀನಿನಲ್ಲಿ ಇದ್ದ ಕುಂಬಳಕಾಯಿಯನ್ನು ತುಳಿದು ನಾಶ ಮಾಡುತ್ತೇವೆ ಸೂಳೆ ಮಕ್ಕಳಾ ಏನು ಕಿತ್ತುಕೊಳ್ಳುತ್ತೀರಿ ಎಂದು ಅವ್ಯಾಚ್ಯ ಶಬ್ದಗಳಿಂದ ಬೈದು ಮಚ್ಚು ತೋರಿಸಿ ಕೊಲೆ ಮಾಡುತ್ತೇವೆ ಎಂದು ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಚಾ ಸಾ 4 ರವರು ಸ್ಥಳಕ್ಕೆ ಬಂದು ಆರೋಪಿಯನ್ನು ತಬ್ಬಿ ಹಿಡಿದು ಮಚ್ಚನ್ನು ಕಸಿದುಕೊಂಡರು ಆನಂತರ ಆರೋಪಿಗೆ ಹರೀಶ ಕುಮ್ಮಕ್ಕು ನೀಡಿರುವುದು ತಿಳಿದು ಬಂದಿತ್ತು ಎಂದರೆ ಸರಿಯಲ್ಲ. ಈ ಬಗ್ಗೆ ಚಾ ಸಾ 1 ದಿನಾಂಕ 21.12.2015 ರಲ್ಲಿ ದೂರು ದಾಖಲಿಸಿದರು ಎಂದರೆ ನನಗೆ ಗೊತ್ತಿಲ್ಲ. ಈ ಬಗ್ಗೆ ನಾನು ದಿನಾಂಕ 22.012.2015 ರಂದು ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯ ಕಲಂ 161 ರ ಹೇಳಿಕೆಯನ್ನು ನಿ ಪಿ 4 ಎಂದು ಗುರುತಿಸಲಾಯಿತು. ನಂತರ ದಿನಾಂಕ 22.12.2015 ರಂದು ಪೊಲೀಸರು ಘಟನಾ ಸ್ಥಳಕ್ಕೆ ಬಂದಾಗ ಅವರಿಗೆ ನಾನೇ ಸ್ಥಳ ತೋರಿಸಿ ಮಚ್ಚನ್ನು ಹಾಜರಿಸಿದೆ

ಅದನ್ನು ಪೊಲೀಸರು ಅಮಾನತ್ ಪಡಿಸಿಕೊಂಡು ಹಾಗೂ ಮಹಜರ್ ನ್ನು ನನ್ನ, ಚಾ ಸಾ 5 ಮತ್ತು 6 ರವರ ಸಮಕ್ಷಮ ಬೆಳಿಗ್ಗೆ 11.00 ಕ್ಕೆ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

2. ಆರೋಪಿಯೊಂದಿಗೆ ರಾಜಿ ಮಾಡಿಕೊಂಡ ಅವರಿಗೆ ಸಹಾಯ ಮಾಡಲು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಆರೋಪಿ ಪರ ಪಾಟಿ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.

ಮರು ವಿಚಾರಣೆ ಇಲ್ಲಃ

(ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ.ಹೇ.ಕೇ.ಸ.ಇ.**

1ನೇ ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ,
ಹೊಳೆನರಸೀಪುರ